# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 77(17) |
| ಸದಸ್ಯರ ಹೆಸರು | ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹುಲ್ಲುಗಾವಲುಗಳನ್ನು ಕೇವಲ ಬಂಜರು ಭೂಮಿ ಎಂದು ಸರ್ಕಾರಗಳು ಮತ್ತು ಸಾರ್ವಜನಿಕರು ಪರಿಗಣಿಸಿ ಅವುಗಳನ್ನು ವಾಣಿಜ್ಯ ಬಳಕೆಯ ಕೃಷಿ ಭೂಮಿಗಳನ್ನಾಗಿ ಮಾರ್ಪಡಿಸುವುದರ ಜೊತೆಗೆ ತೀವ್ರ ನಗರೀಕರಣ, ಕೈಗಾರಿಕೀಕರಣ ಮತ್ತು ಅತಿಯಾದ ಜಾನುವಾರು ಮೇಯಿಸುವಿಕೆಯಿಂದಾಗಿ ಹುಲ್ಲುಗಾವಲುಗಳು ಮರೆಯಾಗಿರುವುದರಿಂದ, ಒಂದು ಸಂಪೂರ್ಣ ಪರಿಸರ ವ್ಯವಸ್ಥೆಯೇ ಅಳಿವಿನ ಹಾದಿ ಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972 ರ ಕಲಂ 27 ಹಾಗೂ 33 ರನ್ವಯ ವನ್ಯಜೀವಿಧಾಮ /ರಾಷ್ಟ್ರೀಯ ಉದ್ಯಾನವನಗಳಲ್ಲಿ ಜನರ ಪ್ರವೇಶ /ಜಾನುವಾರುಗಳ ಮೇಯಿಸುವಿಕೆಯನ್ನು ನಿಯಂತ್ರಿಸಲಾಗುತ್ತಿದೆ. ಆದುದರಿಂದ ಹುಲ್ಲುಗಾವಲುಗಳು ಮರೆಯಾಗುವ ಸನ್ನಿವೇಶ ಉದ್ಭವಿಸುವುದಿಲ್ಲ. |
| ಆ) | ಬಂದಿದ್ದಲ್ಲಿ, ಮರಗಳಿಲ್ಲ ಎಂಬ ಒಂದೇ ಕಾರಣಕ್ಕೆ ನಿರುಪಯುಕ್ತವೆಂದು ಪರಿಗಣಿಸಲ್ಪಟ್ಟ ಈ ಹುಲ್ಲುಗಾವಲುಗಳೇ ಸಾವಿರಾರು ಕೀಟಗಳು, ಚಿಟ್ಟೆಗಳು, ಸರೀಸೃಪಗಳು. ಸಣ್ಣ ಸಸ್ತನಿಗಳು ಹಾಗೂ ಪಕ್ಷಿಗಳ ಜೀವನಾಡಿಯಾಗಿರುವುದರ ಜೊತೆಗೆ ಸಂಪೂರ್ಣವಾಗಿ ಅವುಗಳ ನೈಸರ್ಗಿಕ ಆವಾಸಸ್ಥಾನವಾಗಿವೆ. ಈ ವಾಸ್ತವದ ಹಿನ್ನಲೆಯಲ್ಲಿ ಹೆಚ್ಚಿನ ಹುಲ್ಲುಗಾವಲು ಪ್ರದೇಶಗಳನ್ನು ಸೃಷ್ಟಿಸುವ ತುರ್ತು ಅನಿವಾರ್ಯತೆ ಇದ್ದು ಆ ದಿಕ್ಕಿನಲ್ಲಿ ಅರಣ್ಯ ಇಲಾಖೆ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; | ಆದಾಗ್ಯೂ, ಸಂರಕ್ಷಿತ ಪ್ರದೇಶಗಳಲ್ಲಿ ಲಂಟಾನಾ ಮತ್ತು ಸೆನ್ನಾದಂತಹ ಕಳೆಗಳನ್ನು ತೆಗೆದುಹಾಕಲು ಹಾಗೂ ನೈಸರ್ಗಿಕ ಹುಲ್ಲುಗಾವಲುಗಳ ಆವಾಸಸ್ಥಾನಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಒಂದು ಹೆಬ್ಬಕ್ಕ ಪಕ್ಷಿ ಸ್ವಚ್ಛಂದವಾಗಿ ಬದುಕಲು 150 ರಿಂದ 200 ಚದರ ಕಿಲೋಮಿಟರ್ ವಿಸ್ತೀರ್ಣದ ಹುಲ್ಲುಗಾವಲು ಬೇಕು ಎಂಬ ಅಂದಾಜಿದ್ದು, ಅಂದರೆ, ಒಂದು ಹಕ್ಕಿಯ ಉಳಿವಿನ ಹಿಂದೆ ನೂರಾರು ಚದರ ಕಿಲೋಮೀಟರ್ ನೈಸರ್ಗಿಕ ಪರಿಸರ ಇರಲೇಬೇಕಾಗಿದ್ದು. ಆ ಹಿನ್ನಲೆಯಲ್ಲಿ ಪ್ರಸ್ತುತ ಇರುವ ಹುಲ್ಲುಗಾವಲುಗಳ ಸಂರಕ್ಷಣೆ ಮಾಡುವುದರ ಜೊತೆಗೆ ಮತ್ತಷ್ಟು ಹೊಸ ಹುಲ್ಲುಗಾವಲು ಪ್ರದೇಶಗಳನ್ನು ಸೃಷ್ಟಿಸುವ ದಿಕ್ಕಿನಲ್ಲಿ ತುರ್ತಾಗಿ | ಹೆಬ್ಬಕ್ಕಿ ಪಕ್ಷಿಗಳು (Great Indian Bustard) ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಕಂಡು ಬಂದಿರುತ್ತದೆ. ಸದರಿ ಪಕ್ಷಿಗಳ ಆವಾಸಸ್ಥಾನದ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಕಳೆ ಗಿಡಗಳ ನಿರ್ಮೂಲನೆ ಮಾಡಿ ಒಟ್ಟು 210 ಹೆಕ್ಟೇರ್ ಪ್ರದೇಶದಲ್ಲಿ ಸ್ಥಳೀಯ ಹುಲ್ಲು ಪ್ರಭೇದಗಳನ್ನು ಬಿತ್ತನೆ ಮಾಡಿ ಹುಲ್ಲುಗಾವಲುಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.<br>ರಾಣೇಬೆನ್ನೂರು ಕೃಷ್ಣಮೃಗ ಅಭಯಾರಣ್ಯದಲ್ಲಿ ಹೆಬ್ಬಕ್ಕಿ ಪಕ್ಷಿಗಳ |

| | | |
|---|---|---|
| | ಮುಂದಾಗಬೇಕಿದ್ದು. ಈ ನಿಟ್ಟಿನಲ್ಲಿ ಸರ್ಕಾರ ವಹಿಸುವ ಕ್ರಮಗಳೇನು? | ಆವಾಸಸ್ಥಾನವನ್ನು ಮರುಸ್ಥಾಪಿಸಲು ಅಭಯಾರಣ್ಯದ ನಿರ್ವಹಣಾ ಯೋಜನೆ ಅವಧಿ 2015-16 ರಿಂದ 2024-25 ರಲ್ಲಿ ಒಟ್ಟು 800 ಹೆಕ್ಟೇರ್ ಪ್ರದೇಶದಲ್ಲಿರುವ ನೀಲಗಿರಿ ಮರಗಳನ್ನು ಬುಡಸಮೇತ ತೆಗೆದು ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅಲ್ಲದೆ 2019-20 ನೇ ಸಾಲಿನಿಂದ 2025-26 ನೇ ಸಾಲಿನವರೆಗೆ ಒಟ್ಟು 994.671 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಅನಗತ್ಯವಾಗಿ ಬೆಳೆದಿರುವ ಲಂಟಾನ ಮತ್ತು ಇತರೆ ಕಳೆಗಿಡಗಳನ್ನು ನಿರ್ಮೂಲನೆ ಮಾಡಿ ಹುಲ್ಲುಗಾವಲನ್ನು ನಿರ್ಮಾಣ ಮಾಡಿ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳುವುದರ ಮೂಲಕ ಅಳಿವಿನಂಚಿನಲ್ಲಿರುವ ಹೆಬ್ಬಕ್ಕಿ ಪಕ್ಷಿಗಳ ಆವಾಸಸ್ಥಾನವನ್ನು ಮರುಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

**ಇ-ಸಂಖ್ಯೆ: ಅಪಜೀ 24 ಎಫ್‌ಟಿಎಸ್ 2026**

**(ರಾಮಲಿಂಗಾರೆಡ್ಡಿ)**
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು